# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ    ದಿನಾಂಕ : DATE : 03/05/2019

---

# ಮಾಸ್ಟರ್ ಲಾಫ್ಟರ್ ಹಿರಣ್ಣಯ್ಯ ಇನ್ನಿಲ್ಲ

**ಬೆಂಗಳೂರು:** ಸಾಮಾಜಿಕ ಪಿಡುಗುಗಳಿಗೆ ಹಾಸ್ಯದ ಮೂಲಕ ಚುಚ್ಚುಮದ್ದು ನೀಡುತ್ತಾ, ಸರ್ವ ಸರಕಾರಗಳ ಪಾಲಿಗೆ ಸದಾ ಪ್ರತಿಪಕ್ಷವಾಗಿ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದ ರಂಗಭೂಮಿಯ ಮೇರು ಕಲಾವಿದ ಮಾಸ್ಟರ್ ಹಿರಣ್ಣಯ್ಯ(85) ಇನ್ನಿಲ್ಲ.


1934-2019

ವಯೋಸಹಜ ಅನಾರೋಗ್ಯ ಮತ್ತು ಲಿವರ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಗುರುವಾರ ಬೆಳಗ್ಗೆ 8.45ರ ಹೊತ್ತಿಗೆ ಬಿಜಿಎಸ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ರಂಗಭೂಮಿ, ಸಿನಿಮಾ, ಟಿವಿಗಳಲ್ಲಿ ಅರ್ಧ ಶತಮಾನದ ಕಾಲ ಗಟ್ಟಿಯಾಗಿ ನೆಲೆ ನಿಂತು ತಮ್ಮದೇ ಮಾದರಿಯನ್ನು ದಾಖಲಿಸಿದ 'ಮಾಸ್ಟರ್ ಲಾಫ್ಟರ್' ಹಿರಣ್ಣಯ್ಯ ರಾಜ್ಯ ಮಾತ್ರವಲ್ಲದೆ, ದೇಶ-ವಿದೇಶಗಳಲ್ಲೂ ಮಿಂಚಿದ್ದರು. ಲಂಚಾವತಾರ, ನಡುಬೀದಿ ನಾರಾಯಣದಂಥ ನಾಟಕಗಳ ಮೂಲಕ ಭ್ರಷ್ಟರನ್ನು ನಡುಬೀದಿಯಲ್ಲಿ ನಿಲ್ಲಿಸಿದ ಮಾಸ್ಟರ್ ನಿಧನಕ್ಕೆ ಕರುನಾಡು ಕಂಬನಿ ಮಿಡಿದಿದೆ.

»15

**ಸರಕಾರಗಳನ್ನೇ ನಡುಗಿಸಿದ್ದ ಮಾಸ್ಟರ್ ನಾಟಕಗಳೇ ಅವರ ಪ್ರತಿಭಟನೆಯ ಅಸ್ತ್ರ** 14

---

# ಮಾಸ್ಟರ್ ಹಿರಣ್ಣಯ್ಯ ಇನ್ನಿಲ್ಲ

» ಮೊದಲ ಪುಟದಿಂದ

ಅವರು ಪತ್ನಿ, ಐವರು ಮಕ್ಕಳು ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ. ಅವರ ಪಾರ್ಥಿವ ಶರೀರದ ಅಂತಿಮ ವಿಧಿವಿಧಾನಗಳು ಗುರುವಾರ ಸಂಜೆ ಬನಶಂಕರಿ ಚಿತಾಗಾರದಲ್ಲಿ ವೈದಿಕ ಪದ್ಧತಿಯಂತೆ ನಡೆಯಿತು. ಹಿರಿಯ ಪುತ್ರ ಬಾಬು ಹಿರಣ್ಣಯ್ಯ ಅಂತ್ಯ ಸಂಸ್ಕಾರ ನೆರವೇರಿಸಿದರು. ಕಿರಿಯ ಪುತ್ರರಾದ ಗುರುನಾಥ ಮತ್ತು ಶ್ರೀಕಾಂತ್ ಹಿರಣ್ಣಯ್ಯ ಭಾಗಿಯಾದರು.

**ಲಿವರ್ ಕ್ಯಾನ್ಸರ್ ಇತ್ತು:** ಹಿರಣ್ಣಯ್ಯ ಅವರು ಕಳೆದ ಮೂರು ತಿಂಗಳಿಂದ ಲಿವರ್ (ಯಕೃತ್) ಸೋಂಕಿನಿಂದ ಬಳಲುತ್ತಿದ್ದರು. ಮೊದಲು ಲಿವರ್ ಸಿರಾಸಿಸ್ ಉಂಟಾಗಿ, ನಂತರ ಕ್ಯಾನ್ಸರ್‌ಗೆ ತಿರುಗಿತ್ತು. ಹೀಗಾಗಿ ಚಿಕಿತ್ಸೆಯೊಂದಿಗೆ ಲಿವರ್ ಒಳ ಭಾಗದಲ್ಲಿ ಕಿಮೋಥೆರಪಿ ನೀಡಲಾಗುತ್ತಿತ್ತು. ಇದರಿಂದ ಕೊಂಚ ಸುಧಾರಿಸಿದ್ದರಾದರೂ, ವಯೋಸಹಜ ಆರೋಗ್ಯ ಸಮಸ್ಯೆಗಳು ಬಾದಿಸಿತ್ತು. ಬಹು ಅಂಗಾಂಗ ವೈಫಲ್ಯಗೊಂಡು ಹಿರಣ್ಣಯ್ಯ ಅವರು ಮೃತಪಟ್ಟಿದ್ದಾಗಿ ಚಿಕಿತ್ಸೆ ನೀಡುತ್ತದ್ದ ಬಿಜಿಎಸ್ ಆಸ್ಪತ್ರೆಯ ಲಿವರ್ ಚಿಕಿತ್ಸಾ ತಜ್ಞ ಡಾ. ಸಂದೀಪ್ ಸತ್ಸಂಗಿ ಮಾಹಿತಿ ನೀಡಿದ್ದಾರೆ.

**ಅಂತಿಮ ದರ್ಶನ:** ಹಿರಣ್ಣಯ್ಯ ಇನ್ನಿಲ್ಲ ಎನ್ನುವ ಸುದ್ದಿ ಬಹಿರಂಗಗೊಳ್ಳುತ್ತಿದ್ದಂತೆ ರಂಗಭೂಮಿ, ಚಲನಚಿತ್ರ ಮತ್ತು ಸಾಹಿತ್ಯ ವಲಯದ ಹಲವಾರು ಗಣ್ಯರು ಮತ್ತು ಬಂಧುಗಳು ಬೆಂಗಳೂರಿನ ಬನಶಂಕರಿಯಲ್ಲಿರುವ ಅವರ ಮನೆಯತ್ತ ಅಂತಿಮ ದರ್ಶನಕ್ಕೆ ಧಾವಿಸಿದರು. ಹಲವು ಮಂದಿ ರಂಗ ಗೆಳೆಯರು ಸೇರಿ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲು ಮುಂದಾಗಿದ್ದರು. ಆದರೆ ಹಿರಣ್ಣಯ್ಯ ಅವರ ಆಸೆಯಂತೆ ಮನೆ ಬಳಿಯೇ ಸಾರ್ವಜನಿಕ ದರ್ಶನಕ್ಕೆ ಕುಟುಂಬದವರೇ ವ್ಯವಸ್ಥೆ ಮಾಡಿದರು.

ಬಿಜಿಎಸ್ ಆಸ್ಪತ್ರೆಯಿಂದ ಆ್ಯಂಬುಲೆನ್ಸ್ ಮೂಲಕ ಮಧ್ಯಾಹ್ನ 11.45ಕ್ಕೆ ಬನಶಂಕರಿಯಲ್ಲಿರುವ ಅವರ ನಿವಾಸಕ್ಕೆ ಪಾರ್ಥಿವ ಶರೀರವನ್ನು ತರಲಾಯಿತು. ಸಂಜೆ 4.45ರವರೆಗೂ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಈ ವೇಳೆ ರಾಜಕೀಯ ಮುಖಂಡರಾದ ದಿನೇಶ್ ಗುಂಡೂರಾವ್, ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆಗೆ ಹಲವಾರು ಮಂದಿ ಅಂತಿಮ ದರ್ಶನ ಪಡೆದರು. ರಾಕ್‌ಲೈನ್ ವೆಂಕಟೇಶ್, ದೇವರಾಜ್ ಸೇರಿದಂತೆ ಸಿನಿಮಾ ರಂಗದ ಹಲವರೂ ಅಂತಿಮ ದರ್ಶನ ಪಡೆದರು. ರಂಗಭೂಮಿಯ ಹಿರಿಯ ಮತ್ತು ಕಿರಿಯ ಕಲಾವಿದರ ದಂಡೇ ಸೇರಿತ್ತು. ಸಂಜೆ 5 ಗಂಟೆಗೆ ಬನಶಂಕರಿ ಚಿತಾಗಾರಕ್ಕೆ ಪಾರ್ಥಿವ ಶರೀರವನ್ನು ತರಲಾಯಿತು. ಕುಟುಂಬದ ಸದಸ್ಯರು, ಹತ್ತಿರದ ಬಂಧುಗಳು ಸ್ನೇಹಿತರು ಮತ್ತು ಅಭಿಮಾನಿಗಳ ಸಮ್ಮುಖದಲ್ಲಿ ಅಂತಿಮ ಸಂಸ್ಕಾರ ನೆರವೇರಿಸಲಾಯಿತು.

ಹಿರಣ್ಣಯ್ಯ ನಿಧನದಿಂದ ರಂಗಭೂಮಿ ಒಂದು ಅಪೂರ್ವ ರತ್ನವನ್ನು ಕಳೆದುಕೊಂಡಿದೆ. ಮೃತರ ಆತ್ಮಕ್ಕೆ ಭಗವಂತ ಶಾಂತಿ ನೀಡಲಿ.
-ಕುಮಾರಸ್ವಾಮಿ ಸಿಎಂ

ಲಂಚಾವತಾರದಂಥ ರಾಜಕೀಯ ವಿಡಂಬನಾತ್ಮಕ ನಾಟಕ ಅವರಿಗೆ ಹೆಚ್ಚು ಹೆಸರು ತಂದುಕೊಟ್ಟಿತ್ತು. ಇವರ ನಿಧನದಿಂದ ರಂಗಭೂಮಿ ಅನಾಥಭಾವದಲ್ಲಿ ಮುಳುಗುವಂತಾಗಿದೆ.
-ಜಿ. ಪರಮೇಶ್ವರ್ ಡಿಸಿಎಂ

ಹಿರಣ್ಣಯ್ಯ ರಂಗಭೂಮಿಯ ಒಳ್ಳೆಯ ಕಲಾವಿದರು, ಸಾಮಾಜಿಕ ಕಳಕಳಿಯಿಂದ ನಾಟಕಗಳನ್ನು ಮಾಡುತ್ತಿದ್ದರು. ಅವರ ನಿಧನದಿಂದ ರಂಗಭೂಮಿಗೆ ದೊಡ್ಡ ನಷ್ಟವಾಗಿದೆ.
-ಸಿದ್ದರಾಮಯ್ಯ ಮಾಜಿ ಸಿಎಂ

'ಲಂಚಾವತಾರ' ನಾಟಕದ ಮೂಲಕ ಮನೆ ಮಾತಾಗಿದ್ದ ಹಿರಣ್ಣಯ್ಯ ನಿಧನ ತೀವ್ರ ದುಃಖ ತಂದಿದೆ.
-ಬಿ.ಎಸ್.ಯಡಿಯೂರಪ್ಪ ಮಾಜಿ ಸಿಎಂ

ಮಾಸ್ಟರ್ ಹಿರಣ್ಣಯ್ಯನವರು ಕನ್ನಡ ರಂಗಭೂಮಿಯ ಒಳ ಬಲ. ರಂಗದ ಮೇಲೆ ವಿದ್ಯಮಾನಗಳಿಗೆ ಪ್ರತಿಕ್ರಿಯಿಸುತ್ತ, ನಿಂತಲ್ಲೇ ಪಾತ್ರವನ್ನು ಬೆಳೆಸುವ ಅದ್ಭುತ ಪ್ರತಿಭಾವಂತರು. ನಾಟಕಗಳ ಮೂಲಕ ಸಾಮಾಜಿಕ ಹಾಗೂ ರಾಜಕೀಯ ಎಚ್ಚರ ಮೂಡಿಸಿದ ಮಹಾಶಕ್ತಿ.
**-ಬರಗೂರು ರಾಮಚಂದ್ರಪ್ಪ**, ನಿರ್ದೇಶಕ, ಲೇಖಕ